# ನಾನಲ್ಲದ ನಾನು ಶ್ರುತಿ



**ಗಗನಾ**
**ಉದಯದ 'ದೊಡ್ಡಮನೆ ಸೊಸೆ'ಯ ಶ್ರುತಿ**

★ *ಟಿವಿ ಜೊತೆಗಿನ ನಿಮ್ಮ ಬಾಂಧವ್ಯವನ್ನು ಹೇಳಿ?*

ಸನ್ ನೆಟ್‌ವರ್ಕ್‌ನ ಚಿಂಟುವಿನಲ್ಲಿ ನಿರೂಪಕಿ ಆಗಿದ್ದೆ. ಅದರಲ್ಲೂ ನಾನು ಡಾನ್ಸ್ ಸ್ಪರ್ಧೆಗೆ ಆಡಿಷನ್ ನೀಡಲು ಹೋಗಿದ್ದೆ. ನನಗೆ ನಿರೂಪಣೆ ಮಾಡಲು ಅವಕಾಶ ಕೊಟ್ಟರು. ಝಿ ಕನ್ನಡದ 'ಕುಣಿಯೋಣು ಬಾರಾ 6' ಸ್ಪರ್ಧೆಯಲ್ಲಿಯೂ ಬಹುಮಾನ ಗಿಟ್ಟಿಸಿದೆ. ಕಲರ್ಸ್ ಕನ್ನಡದ 'ರಿದಮ್ ತದಿಮ್' ವಿಜೇತಳಾದೆ. ಅದರ ನಂತರ 'ಕಾಲ ಚಕ್ರ' ಎನ್ನುವ ಧಾರಾವಾಹಿಯಲ್ಲಿ ಚಿಕ್ಕ ಪಾತ್ರವನ್ನು ನಿರ್ವಹಿಸಿದ್ದೆ. ಈಗ ಶ್ರುತಿ ಆಗಿದ್ದೇನೆ. ಇದೇ ನನ್ನ ಮೊದಲ ಪ್ರಧಾನ ಪಾತ್ರ. ನಾನು ವೃತ್ತಿಯನ್ನು ಆರಂಭಿಸಿದ ಟಿವಿಯಲ್ಲಿಯೇ ಪ್ರಧಾನ ಪಾತ್ರವನ್ನು ನಿರ್ವಹಿಸುವುದು ಸಂತೋಷದ ಸಂಗತಿ.

★ *ನಿಮ್ಮ ಆಯ್ಕೆ ನೃತ್ಯವೋ ಅಥವಾ ಅಭಿನಯವೋ?*

ನನಗೆ ಚಿಕ್ಕ ವಯಸ್ಸಿನಿಂದಲೂ ನಟನೆ ಎನ್ನುವುದು ಪ್ಯಾಶನ್. ಅದಕ್ಕಾಗಿ ಯಾವುದೇ ತರಬೇತಿಯನ್ನೂ ಪಡೆಯಲಿಲ್ಲ. ಡಾನ್ಸ್ ಮಾತ್ರ ಅಭ್ಯಾಸ ಮಾಡಿದೆ. ಅಂದರೆ ಪಾಶ್ಚಿಮಾತ್ಯ ಹಾಗೂ ಸಮಕಾಲಿನ ಸಂದರ್ಭಕ್ಕೆ ಹೊಂದಿಕೆಯಾಗುವ 'ಫ್ರಿ ಸ್ಟೈಲ್' ಡಾನ್ಸ್ ಮಾಡುತ್ತೇನೆ. ಹೈಸ್ಕೂಲ್‌ನಲ್ಲಿ ಓದುವ ಹೊತ್ತಿಗಾಗಲೇ ನಿರೂಪಕಿಯಾಗಿ ಗುರುತಿಸಿಕೊಂಡಿದ್ದೆ. ತೆಲುಗು ಸಿನಿಮಾವೊಂದರಲ್ಲಿ ನಾಯಕಿಯಾಗಿ ನಟಿಸಿದ್ದೆ. ಅದು ಕಾರಣಾಂತರಗಳಿಂದ ಅರ್ಧಕ್ಕೆ ನಿಂತಿತು. ಮಾಡೆಲಿಂಗ್ ಕೂಡ ಮಾಡಿದೆ. ಮಿಸ್ ಕರ್ನಾಟಕ ಇಂಟರ್‌ನ್ಯಾಷನಲ್ 16ರಲ್ಲಿ ಫಸ್ಟ್ ರನ್ನರ್ ಅಪ್ ಆಗಿದ್ದೆ. ನನ್ನ ಮೊದಲ ಆಯ್ಕೆ ನಟನೆ, ಆದ್ದರಿಂದ ಅದನ್ನೇ ಮಾಡುತ್ತೇನೆ.

★ *ಶ್ರುತಿ ಬಗ್ಗೆ ಹೇಳುವುದಾದರೆ...*

ಶ್ರುತಿ ತುಂಟ ಹುಡುಗಿ. ಹಳ್ಳಿಯ ಆಕೆ ಯಾರಿಗೂ ಕೆಟ್ಟದನ್ನು ಬಯಸದ ಒಳ್ಳೆಯವಳು. ಎಲ್ಲರೊಂದಿಗೆ ಸಮಾನವಾಗಿ ಬೆರೆಯುವ ಆಕೆ ದುಷ್ಟತನವನ್ನು ನಿಲ್ಲಿಸಿ ಒಳ್ಳೆಯದನ್ನು ಮಾಡಬೇಕು ಎನ್ನುವ ಆಶಯ ಇರುವವಳು. ಈಗ ಅವಳಿಗೆ ಸೂರ್ಯನ ಜೊತೆ ಒಡನಾಟ ಬೆಳೆದಿದೆ.

★ *ಹಳ್ಳಿ ಪಾತ್ರವನ್ನು ಹೇಗೆ ನಿರ್ವಹಿಸುತ್ತಿದ್ದೀರಿ?*

ಇದು ಸ್ವಲ್ಪ ಕಷ್ಟದ ಕೆಲಸ. ನಗರದಲ್ಲಿ ಬೆಳೆದ ನಾನು ಹಳ್ಳಿ ಜೀವನ ಅನುಭವಿಸಿಲ್ಲ. ಹಳ್ಳಿಯ ಮುಗ್ಧತೆಯನ್ನು ಅನುಕರಿಸಲೇಬೇಕು. ಅದಕ್ಕಾಗಿ ಬೇರೆ ಬೇರೆ ಸಿನಿಮಾಗಳನ್ನು ನೋಡಿ ಅಭ್ಯಾಸ ಮಾಡಿದ್ದೇನೆ. ಚಿತ್ರೀಕರಣಕ್ಕೆ ಮಂಡ್ಯ, ಕನಕಪುರ, ರಾಮನಗರದ ಹಳ್ಳಿಗಳಿಗೆ ಹೋಗಿದ್ದೇವೆ. ಆಗ ಅಲ್ಲಿನ ಜನಜೀವನವನ್ನು ಸೂಕ್ಷ್ಮವಾಗಿ ನೋಡಿದ್ದೇನೆ. ಅದು ನಟಿಸಲು ನನಗೆ ಸಹಾಯ ಮಾಡಿದೆ.

★ *ಗಗನಾ ಮತ್ತು ಶ್ರುತಿ ನಡುವೆ ಹೋಲಿಕೆ ಇದೆಯಾ?*

ಗಗನಾ ಆಗಿ ನಾನು ನಗರದಲ್ಲಿ ಬೆಳೆದಿದ್ದೇನೆ. ಬಿಕಾಂ ಓದುತ್ತಿದ್ದೇನೆ. ಒಬ್ಬ ವಿದ್ಯಾರ್ಥಿಯಾಗಿ ಸಂಪೂರ್ಣವಾಗಿ ಸಮಾಜಕ್ಕೆ ತೆರೆದುಕೊಂಡಿಲ್ಲ. ಸಾಮಾಜಿಕವಾಗಿ ನಾನಲ್ಲದ ಪಾತ್ರವನ್ನು ನಾನು ನಿರ್ವಹಿಸುತ್ತಿದ್ದೇನೆ. ಗುಣದ ದೃಷ್ಟಿಯಲ್ಲಿ ಹೇಳುವುದಾದರೆ ವಯೋಸಹಜ ಕೆಲ ಸಾಮ್ಯತೆಗಳು ಇವೆ. ನನಗೆ ಎಂತಹ ಸಂದರ್ಭವನ್ನು ದಿಟ್ಟವಾಗಿ ಎದುರಿಸುವ ಛಾತಿ ಇದೆ. ಅದು ಆಕೆಯಲ್ಲಿಯೂ ಇದೆ. ಶೂಟಿಂಗ್‌ಗೆ ಹೊರಟೆ ಎಂದರೆ ಗಗನಾ ಆಗಿ ಇರುವುದಿಲ್ಲ. ನಮ್ಮ ತಂಡ ಕೂಡ ನನ್ನನ್ನು ಶ್ರುತಿಯಾಗಿಯೇ ನೋಡುತ್ತದೆ.

■ **ರಾಘವೇಂದ್ರ**